ಮಾಡಿಲ್ಲ. ಯಾರೋ ಗುತ್ತಿಗೆ ತೆಗೆದುಕೊಳ್ಳುತ್ತಾರೆ ಅವರು ಇರುವುದೊಂದನ್ನು ಬಿಟ್ಟರೆ ಮತ್ತೆ ಯಾವುದೂ ಇಲ್ಲ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಇದನ್ನು ವಿರೋಧ ಮಾಡುವುದರಲ್ಲಿ ಅರ್ಥವಿಲ್ಲ. ಮಹಾನಗರಪಾಲಿಕೆಗೆ ಹಣ ಬರಬೇಕಾಗುತ್ತದೆ.

ಶ್ರೀ ಆರ್. ಅಶೋಕ್ :— ಇದನ್ನು ಮಾಡಬಾರದು. ಇದಕ್ಕೆ ನಮ್ಮದಂತೂ ವಿರೋಧವಿದೆ. ಗಂಟಿಗೆ ಇಂತಿಷ್ಟು ತೆರಿಗೆಯೆಂದು ಹಾಕಿದರೆ ಹೇಗೆ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಇದಕ್ಕೆ ಇಡೀ ಬೆಂಗಳೂರು ನಗರದಲ್ಲಿ ವಿರೋಧವಿದೆ.

ಶ್ರೀ ಆರ್. ಅಶೋಕ್ :— ಪಾರ್ಕಿಂಗ್ ಜಾಗದಲ್ಲೆಲ್ಲಾ ನಗರಪಾಲಿಕೆಯವರು ಲಂಚವನ್ನು ವಸೂಲಿ ಮಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಆದ್ದರಿಂದ ತಾವೇನು ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ಶುಲ್ಕವನ್ನು ನಿಗಧಿ ಮಾಡಿದ್ದೀರಿ ಅದನ್ನು ಕೈಬಿಡಬೇಕು. ಜನರ ಮೇಲೆ ಇದು ಹೊರೆಯಾಗುತ್ತದೆ. ಇದಕ್ಕೆ ಜನರ ವಿರೋಧವಿದೆ. ಇದನ್ನು ದಯವಿಟ್ಟು ಮಾಡಬಾರದೆಂದು ವಿನಂತಿಸುತ್ತೇನೆ.

ಗೊಂದಲ

ಶ್ರೀ ಹಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಇದು ಬೆಂಗಳೂರು ಮಹಾನಗರ ಪಾಲಿಕೆಯವರು ತೆಗೆದುಕೊಂಡಿರತಕ್ಕಂಥ ತೀರ್ಮಾನ. ಇದನ್ನು ಅವರು ಜಾರಿಗೆ ಕೊಟ್ಟಿದ್ದಾರೆ. ಇದಕ್ಕೆ ನಾಗರೀಕರಿಂದಲೂ ಕೂಡ ಸ್ವಾಗತ ಬಂದಿದೆ. ಆದ್ದರಿಂದ ಈಗ ಅದನ್ನು ಬದಲಾವಣೆ ಮಾಡುವ ಪರಿಸ್ಥಿತಿಯು ಉದ್ಭವವಾಗುವುದಿಲ್ಲ ಎಂದು ನಾನು ತಿಳಿಸಬಯಸುತ್ತೇನೆ.

5. **ಪ್ರಶಸ್ತಿ.**

ಅಧ್ಯಕ್ಷರು :— ಈಗ ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಈಗ ಒಂದು ಪ್ರಶಸ್ತಿ ಇದೆ. ವರನಟ ಡಾ: ರಾಜ್‌ಕುಮಾರ್‌ರವರು ವಿಧಾನ ಸೌಧದಲ್ಲಿನ ಕಾನ್‌ಫರೆನ್ಸ್ ಹಾಲ್‌ನಲ್ಲಿ ಪ್ರೆಸ್ ಕಾನ್‌ಫರೆನ್ಸ್‌ನ್ನು ಮುಗಿಸಿಕೊಂಡು ಈಗ ಬ್ಯಾಂಕ್ವೆಟ್ ಹಾಲ್‌ಗೆ ಬರುತ್ತಿದ್ದಾರೆ. ಸದನದ ಅನೇಕ ಮಾನ್ಯ ಸದಸ್ಯರುಗಳು ಅವರನ್ನು ಭೇಟಿ

ಮಾಡಲು ಸಮಯಾವಕಾಶವನ್ನು ಕೋರಿದ್ದರಿಂದ ಸದಸ್ಯರುಗಳಿಗೆ ಅಲ್ಲಿಗೆ ಹೋಗಿ ಅವರನ್ನು ಭೇಟಿ ಮಾಡಲು ಅನುಕೂಲವಾಗುವಂತೆ ಈಗ ಸದನದ ಕಾರ್ಯಕಲಾಪಗಳನ್ನು ಮುಗಿಸಿ ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಪುನಃ ಸಮಾವೇಶಗೊಳ್ಳುತ್ತದೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

(ಸದನವು ಕಾರ್ಯಕಲಾಪಗಳನ್ನು 1-43 ಗಂಟೆಗೆ ಮುಕ್ತಾಯಗೊಳಿಸಿ ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು.

ಸಭೆಯು ಮಧ್ಯಾಹ್ನ 3-20ಕ್ಕೆ ಸಮಾವೇಶಗೊಂಡಿತು.

6. ಶಾಸನ ರಚನೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ 2000
ಪರ್ಯಾಲೋಚನಾ ಪ್ರಸ್ತಾವ

+ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1999ರ ನವೆಂಬರ್ ತಿಂಗಳಿನಲ್ಲಿ ದೆಹಲಿಯಲ್ಲಿ ನಡೆದಂಥ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಮತ್ತು ಹಣಕಾಸು ಸಚಿವರುಗಳ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿರುವಂತೆ ಎಲ್ಲಾ ರಾಜ್ಯಗಳಲ್ಲೂ ಕೂಡ ಏಕರೂಪದ ಮಾರಾಟ ತೆರಿಗೆ ಇರಬೇಕು ಎಂಬ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲೂ ಎಲ್ಲಾ ವಸ್ತುಗಳ ಮೇಲೆ ಏಕರೂಪದ ಮಾರಾಟ ತೆರಿಗೆಯನ್ನು ಜಾರಿಗೆ ತರಲಾಗಿದೆ. ಆದರಲ್ಲಿ ನಾಲ್ಕು ವಸ್ತುಗಳ ಮೇಲೆ ಕನಿಷ್ಟ ಮಾರಾಟ ತೆರಿಗೆಯ ದರವನ್ನು ತರಬೇಕೆಂದು ಈ ಮಸೂದೆಯನ್ನು ತರಲಾಗಿದೆ. ನಾವು ಕನಿಷ್ಟ ತೆರಿಗೆಯನ್ನು ಜಾರಿಗೆ ತರದಿದ್ದರೆ ಕೇಂದ್ರ ಸರ್ಕಾರದಿಂದ ನಮಗೆ ಕೊಡುವಂಥ 25 ಪರ್‌ಸೆಂಟ್ ಸಹಾಯದಲ್ಲಿ ಕಡಿತಗೊಳಿಸುತ್ತೇವೆ ಎಂಬ ಸೂಚನೆ ಇರುವ ಹಿನ್ನೆಲೆಯಲ್ಲಿ ನಾವು ಇದನ್ನು ಜಾರಿಗೆ ತರಬೇಕಾಗಿದೆ. ಆದ್ದರಿಂದ ನಾಲ್ಕು ವಸ್ತುಗಳ ತೆರಿಗೆ ದರ ಬಗ್ಗೆ ನಮ್ಮ